# ಪ್ರಧಾನ ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಣಸೂರು.

## ಸಿ.ಸಿ. ಸಂಖ್ಯೆಃ 620/2014

ಪಿ.ಡಬ್ಲ್ಯೂ- 01 ಸಿ.ಡಬ್ಲ್ಯೂ- 01

ದಿಃ 02.03.2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

<u>ಮುಂದುವರೆದ ಪಾಟೀ ಸವಾಲುಃ</u> ಆರೋಪಿ ಪರ ವಕೀಲರಾದ ಶ್ರೀ ಪಿ.ಎಲ್.ಕೆ ವಕೀಲರಿಂದಃ

ಗ್ರಾಹಕರಿಂದ ದೂರು ಬಂದಲ್ಲಿ ಅವುಗಳನ್ನು ದಾಖಲಿಸಿಕೊಳ್ಳಲು ಬ್ಯಾಂಕಿನಲ್ಲಿ ಯಾವುದೇ ರಿಜಿಸ್ಟರ್ ಗಳು ಇರುವುದಿಲ್ಲ. ಆದರೆ, ಪ್ರತ್ಯೇಕ ಫೈಲ್ ಗಳಲ್ಲಿ ಇಟ್ಟಿರುತ್ತೇವೆ. ಪ್ರತ್ಯೇಕವಾದ ದೂರುಗಳ ಪಟ್ಟಿಯನ್ನು ಮಾಡುವುದಿಲ್ಲ.

ನನ್ನ ಹುಣಸೂರು ಶಾಖೆಯ ಅವದಿಯಲ್ಲಿ ಆರೋಪಿಯ ವಿರುದ್ಧ ಚಾಸಾ 2 ರಿಂದ 5 ರವರು ನೀಡಿದ ದೂರನ್ನು ಹೊರತುಪಡಿಸಿ ಬೇರೆ ಯಾರು ಆರೋಪಿಯ ವಿರುದ್ಧ ದೂರು ಸಲ್ಲಿಸಿರುವುದಿಲ್ಲ. ಸದರಿ ಶಾಖೆಯ ಬೇರೆ ಮ್ಯಾನೇಜರ್ ಗಳ ವಿರುದ್ಧ ದೂರುಗಳನ್ನು ಸಲ್ಲಿಸಿದ್ದಾರೋ ಅಥವಾ ಇಲ್ಲವೋ ಎಂದು ನನಗೆ ಗೊತ್ತಿಲ್ಲ. ಬ್ಯಾಂಕುಗಳಲ್ಲಿ ಗ್ರಾಹಕರು ಸಿಬ್ಬಂದಿಗಳ ವಿರುದ್ಧ ಸಲ್ಲಿಸಿದ ದೂರುಗಳನ್ನು ದಾಖಲಿಸಿಕೊಳ್ಳುವ ನೋಂದಣಿ ಪುಸ್ತಕ ಇರುತ್ತದೆ ಎನ್ನುವುದು ಮತ್ತು ಇಲ್ಲ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಆರೋಪಿಯ ವಿರುದ್ಧ ಬಂದ ಮೌಖಿಕ ದೂರುಗಳ ಕುರಿತು ನಾನು ದಾಖಲೆ ಮಾಡಿರುವುದಿಲ್ಲ. ನಾನು ನಮ್ಮ ಮೇಲಾಧಿಕಾರಿಗಳಿಗೆ ಸದರಿ ದೂರುಗಳ ಕುರಿತು ಮೌಖಿಕವಾಗಿ ತಿಳಿಸಿದ್ದೇನು. ಆರೋಪಿಯ ವಿರುದ್ಧ ದೂರು ಸಲ್ಲಿಸಲು ನಮ್ಮ ಮೇಲಧಿಕಾರಿಗಳಿಂದ ಲಿಖಿತ ಆದೇಶ ಬಂದಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

ಆರೋಪಿಯ ವಿರುದ್ಧ ಇಲಾಖಾ ವಿಚಾರಣೆ ನಡೆದಿರುತ್ತದೆ. ನಾನು ಸದರಿ ವಿಚಾರಣೆಯಲ್ಲಿ ಹೇಳಿಕೆಯನ್ನು ಕೊಟ್ಟಿರುವುದಿಲ್ಲ. ಸಾಕ್ಷಿ ಹೇಳುತ್ತಾರೆ ಘಟನೆ ನಡೆದ ಅವಧಿಯಲ್ಲಿಯ ಸಿಬ್ಬಂದಿಗಳು ಹೇಳಿಕೆಯನ್ನು ಕೊಟ್ಟಿರುತ್ತಾರೆ. ನಾನು ಸದರಿ ವಿಚಾರಣೆಯ ವರದಿಯನ್ನು ನೋಡಿರುತ್ತೇನೆ. ಸದರಿ ವಿಚಾರಣೆಯ ವರದಿಯ ಆಧಾರದ ಮೇಲೆ ದೂರು ಕೊಟ್ಟಿರುತ್ತೇನೆ. ಸದರಿ ವರದಿಯನ್ನು ಪೋಲಿಸರಿಗೆ ಕೊಟ್ಟಿರುತ್ತೇನೆ. ಸದರಿ ದಾಖಲೆಯು ನಿ.ಪಿ. 1 ರಿಂದ ನಿ.ಪಿ. 88 ದಾಖಲೆಗಳಲ್ಲಿರುವುದಿಲ್ಲ.

ಹಣ ಹಿಂಪಡೆಯುವ ಫಾರ್ಮ್ ಗಳ ನೋಂದಣಿ ಪುಸ್ತಕಗಳನ್ನು ಬ್ಯಾಂಕಿನಲ್ಲಿಡಬೇಕು ಎನ್ನುವುದು ನಿಜ. ಗ್ರಾಹಕರು ಸದರಿ ಫಾರ್ಮ್ ಅನ್ನು ಪಡೆದ ನಂತರ ನೋಂದಣಿ ಪುಸ್ತಕಕ್ಕೆ ತಮ್ಮ ಹೆಸರನ್ನು ದಾಖಲಿಸಿ ಸಹಿ ಮಾಡಬೇಕು ಎನ್ನುವುದು ನಿಜ. ನಿ.ಪಿ. 23 ರ ಪ್ರಕಾರ ಚಾಸಾ 2 ನೋಂದಣಿ ಪುಸ್ತಕದಲ್ಲಿ ಸಹಿ ಮಾಡಿ ಸದರಿ ಫಾರ್ಮ್ ಅನ್ನು ಪಡೆದುಕೊಂಡಿದ್ದರೋ ಅಥವಾ ಇಲ್ಲವೋ ಎಂದು ನಾನು ಬ್ಯಾಂಕಿನಲ್ಲಿರುವ ನೋಂದಣಿ ಪುಸ್ತಕವನ್ನು ನೋಡಿ ಹೇಳಬೇಕು ಎನ್ನುತ್ತಾರೆ. ನಿ.ಪಿ. 22 ತುರ್ತು ಹಣ ಪಡೆಯಲು ಚಾಸಾ 2 ಬ್ಯಾಂಕಿನ ಮ್ಯಾನೇಜರ್ ನಿಂದ ಪಡೆದ ದಾಖಲೆಯಾಗಿರುತ್ತದೆ. ಸದರಿ ದಾಖಲೆಯಲ್ಲಿ ಚಾಸಾ 2 ರ ಸಹಿ ಇರುತ್ತದೆ. ನಿ.ಪಿ. 22 ರಲ್ಲಿ ಬ್ಯಾಂಕಿನ ಮ್ಯಾನೇಜರ್ ಸಹಿ ಮಾಡಿದ ನಂತರ ಅದರ ವ್ಯವಹಾರವನ್ನು ಗಣಕಯಂತ್ರದಲ್ಲಿ ದಾಖಲಿಸಿ ನಿ.ಪಿ. 22 ಕ್ಕೆ ಸಂಬಂಧಪಟ್ಟ ಸಿಬ್ಬಂದಿ ಸರಿ ಇದೆ ಎಂದು ಸಹಿಯನ್ನು ಮಾಡಿರುತ್ತಾರೆ.

ಬ್ಯಾಂಕಿನಲ್ಲಿ ಗ್ರಾಹಕರು ಹಣ ಹಿಂಪಡೆಯುವ ನಮೂನೆಯನ್ನು ಸಂಬಂಧಪಟ್ಟ ಬ್ಯಾಂಕಿನ ಸಿಬ್ಬಂದಿಗೆ ಕೊಡಬೇಕಾಗುತ್ತದೆ. ಸದರಿ ಸಿಬ್ಬಂದಿ ಖಾತೆ ಮತ್ತು ಖಾತೆಯಲ್ಲಿಯ ಹಣ ಹಾಗೂ ಇನ್ನಿತರ ಮಾಹಿತಿಗಳನ್ನು ಪರಿಶೀಲಿಸಿ ಗ್ರಾಹಕರಿಗೆ ಟೋಕನ್ (ಬಿಲ್ಲೆ) ಕೊಡುತ್ತಾರೆ. ಆ ನಂತರ ಸದರಿ ನಮೂನೆಗೆ ಅಕೌಂಟೆಂಟ್ ಅಥವಾ ಚೆಕ್ಕಿಂಗ್ ಅಧಿಕಾರಿ ಪರಿಶೀಲಿಸಿ ಸಹಿ ಮಾಡಿದ ನಂತರ ಹಣ ಸಂದಾಯ ಮಾಡುವ ಕೌಂಟರ್ ಗೆ ಹೋಗಿ ಅವರು ಗ್ರಾಹಕರಿಗೆ ಹಣ ನೀಡುತ್ತಾರೆ. ಅಲ್ಲಿ ಗ್ರಾಹಕರ ಸಹಿಗಳನ್ನು ಪಡೆಯುವುದಿಲ್ಲ. ಹಣ ಕೊಡುವುದಕ್ಕಿಂತ ಮೊದಲು ಗ್ರಾಹಕರಿಂದ ಸಹಿ ಪಡೆದು ಹಣ ಕೊಡುತ್ತಾರೆ ಎನ್ನುವುದು ಸರಿಯಲ್ಲ. ನಿ.ಪಿ. 23 ಮತ್ತು 24 ರಲ್ಲಿ ಚಾಸಾ 2 ರ ಸಹಿ ಇರುತ್ತದೆ. ನಿ.ಪಿ. 23 ಮತ್ತು 24 ರಲ್ಲಿ ಬ್ಯಾಂಕಿನ ಸಿಬ್ಬಂದಿಗಳು ಚೆಕ್ ಮಾಡಿ ಸಹಿಯನ್ನು ಮಾಡಿರುತ್ತಾರೆ. ಸದರಿ ನಿ.ಪಿ. 23 ಮತ್ತು 24 ರಲ್ಲಿ ಆರೋಪಿಯ ಸಹಿಗಳು ಇರುವುದಿಲ್ಲ. ನನಗೆ ಈ ಪ್ರಕರಣದಲ್ಲಿ ಯಾವುದೇ ವೈಯಕ್ತಿಕ ಮಾಹಿತಿ ಇರುವುದಿಲ್ಲ. ನಾನು ಕೇವಲ ಬ್ಯಾಂಕಿನ ದಾಖಲೆಗಳು ಮತ್ತು ಮೇಲಧಿಕಾರಿಗಳ ಇಲಾಖಾ ವಿಚಾರಣಾ ವರದಿಯ ಆಧಾರವಾಗಿ ಸಾಕ್ಷ್ಯವನ್ನು ಹೇಳುತ್ತಿದ್ದೇನೆ.

ಚಾಸಾ 2 ರ ಖಾತೆಯ ಬದಲಾಗಿ ಹಣ ಚಾಸಾ 3 ರ ಖಾತೆಗೆ ಜಮೆ ಆಗಿದ್ದಕ್ಕೆ ಚಾಸಾ 3 ಬ್ಯಾಂಕಿಗೆ ಯಾವುದೇ ಮಾಹಿತಿಯನ್ನು ಮತ್ತು ದೂರನ್ನು ಕೊಟ್ಟಿರುವುದಿಲ್ಲ. ಚಾಸಾ 2 ಬ್ಯಾಂಕಿಗೆ ಆರೋಪಿಯ ದೂರು ಕೊಟ್ಟ ನಂತರ ಚಾಸಾ 3 ರಿಗೆ ಯಾವುದೇ ನೋಟಿಸನ್ನು ಕೊಡಲಿಲ್ಲ.

ಬ್ಯಾಂಕಿನಲ್ಲಿ ಸಾಮಾನ್ಯವಾಗಿ ಗ್ರಾಹರಿಗೆ ಕೊಡಬೇಕಾದ ಹಣವನ್ನು ಮ್ಯಾನೇಜರ್ ತನಗೆ ಕೊಡಬೇಕು ಎಂದು ಹಣ ಬಟವಡೆ ಮಾಡುವ ಅಧಿಕಾರಿಗೆ ಕೇಳಿದರೆ ಸದರಿ ಬಟವಡೆ ಅಧಿಕಾರಿಯು ಹಣ ಕೊಡಲುಬಹುದು ಅಥವಾ ನಿರಾಕರಿಸಬಹುದು. ಆದರೆ, ದೂರನ್ನು ಸಲ್ಲಿಸುವುದಿಲ್ಲ. ಬ್ಯಾಂಕ್ ನಿಯಮಾವಳಿಗಳ ಪ್ರಕಾರ ಹಣ ಬಟವಡೆ ಮಾಡುವ ಅಧಿಕಾರಿಯು

ಅಂತಹ ಸಂದರ್ಭದಲ್ಲಿ ಮೇಲಧಿಕಾರಿಗಳಿಗೆ ದೂರು ಸಲ್ಲಿಸಬೇಕಾಗುತ್ತದೆ ಎಂದು ನನಗೆ ತಿಳಿದಿದ್ದರೂ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ನಿ.ಪಿ. 28 ಕ್ಕೆ ಚಾಸಾ 2 ನನ್ನ ಸಮಕ್ಷಮ ಸಹಿ ಮಾಡಿದ್ದರೋ ಅಥವಾ ಇಲ್ಲವೋ ಎಂದು ನನಗೆ ಈಗ ನೆನಪಿಲ್ಲ. ಸದರಿ ದೂರನ್ನು ದಿಃ 20.11.2011 ಎಂದು ನಮೂದಿಸಿದ್ದು ಆದರೆ, ಅದನ್ನು ನಾವು ದಿಃ 20.12.2011 ರಂದು ಸ್ವೀಕರಿಸಿರುತ್ತೇವೆ. ನಿ.ಪಿ. 28 ರಲ್ಲಿ ಕೇಸ್ ವರ್ಕರ್ ಗೆ ಎಂದು ಬರೆದಿರುವುದನ್ನು ರದ್ದು ಮಾಡಿ ಮ್ಯಾನೇಜರ್ ಎಂದು ಬರೆದಿದೆ ಎನ್ನುವುದು ನಿಜ. ಸದರಿ ದಾಖಲೆಯಲ್ಲಿ ರಾಜಮ್ಮ ಎಂದು ಸಹಿ ಮಾಡಿರುವುದು ಚಾಸಾ 2 ಸಹಿ ಮಾಡಿರುತ್ತಾರೆ. ಸದರಿ ಮೂರು ಸಹಿಗಳಲ್ಲಿ ಒಂದಕ್ಕೊಂದು ವ್ಯತ್ಯಾಸ ಇದೆ ಎನ್ನುವುದಕ್ಕೆ ಸಾಕ್ಷಿಯು ಮಧ್ಯದ ಮತ್ತು ಕೆಳಗಿನ ಸಹಿಗಳು ಒಂದೇ ತರಹ ಇದ್ದು, ಮೇಲಿನ ಸಹಿಯಲ್ಲಿ ಸ್ವಲ್ಪ ವ್ಯತ್ಯಾಸ ಇದೆ ಎನ್ನುತ್ತಾರೆ. ನಿ.ಪಿ. 22 ರಿಂದ 24 ರಲ್ಲಿಯ ಚಾಸಾ 2 ರ ಸಹಿಗೂ ಮತ್ತು ನಿ.ಪಿ. 28 ರಲ್ಲಿಯ ಸಹಿಗೂ ವ್ಯತ್ಯಾಸ ಇದೆ ಎನ್ನುವುದು ಸರಿಯಲ್ಲ. ನಿ.ಪಿ. 28 ರಲ್ಲಿ ಕೇಸ್ ವರ್ಕರ್ ವಿರುದ್ಧ ನೀಡಿದ್ದ ದೂರನ್ನು ನಾನು ತಿದ್ದುಪಡಿ ಮಾಡಿ ಮ್ಯಾನೇಜರ್ ಎಂದು ಬರೆದು ಚಾಸಾ 2 ರ ಸಹಿಯನ್ನು ನಾನೇ ಮಾಡಿದ್ದೇನೆ ಎನ್ನುವುದು ಸರಿಯಲ್ಲ. ಆರೋಪಿಗೆ ತೊಂದರೆ ಕೊಡುವ ಸಲುವಾಗಿ ಸದರಿ ನಿ.ಪಿ. 28 ದಾಖಲೆಯನ್ನು ನಾನೇ ಸುಳ್ಳು ಸೃಷ್ಟಿ ಮಾಡಿದ್ದೇನೆ ಎನ್ನುವುದು ಸರಿಯಲ್ಲ. ಚಾಸಾ 2 ರಿಗೆ ಹಣ ತಲುಪಿದ್ದು, ಆರೋಪಿ ಯಾವುದೇ ಬ್ಯಾಂಕಿನ ಹಣವನ್ನು ಅಪರಾ-ತಪರಾ ಮಾಡಿಲ್ಲ ಎನ್ನುವುದಕ್ಕೆ ಸಾಕ್ಷಿಯು ನನಗೆ ವೈಯಕ್ತಿಕವಾಗಿ ಗೊತ್ತಿಲ್ಲ ಆದರೆ, ನಿ.ಪಿ. 28 ದೂರಿನ ಪ್ರಕಾರ ಚಾಸಾ 2 ರಿಗೆ ಹಣ ತಲುಪಿಲ್ಲ ಎಂದು ಹೇಳುತ್ತಾರೆ.

ಚಾಸಾ 4 ಆರೋಪಿಯ ವಿರುದ್ಧ ಕೊಟ್ಟಿದ್ದ ದೂರನ್ನು ನಾನು ಪೋಲಿಸರಿಗೆ ತನಿಖೆಯ ಕಾಲಕ್ಕೆ ಕೊಟ್ಟಿದ್ದೇನೋ ಅಥವಾ ಇಲ್ಲವೋ ಎಂದು ನೆನಪಿಲ್ಲ. ಚಾಸಾ 4 ಆರೋಪಿಗೆ ರೂ. 3 ಲಕ್ಷ ಹಣವನ್ನು ಕೊಟ್ಟಿದ್ದರು ಎನ್ನುವುದಕ್ಕೆ ದಾಖಲೆಗಳು ಇರುವುದಿಲ್ಲ. ಆರೋಪಿ ಸದರಿ ಹಣದಲ್ಲಿ ರೂ. 36 ಸಾವಿರಗಳನ್ನು ದುರುಪಯೋಗ ಮಾಡಿಕೊಂಡಿದ್ದಾರೆ ಎನ್ನುವುದಕ್ಕೆ ದಾಖಲೆಗಳು ಇರುವುದಿಲ್ಲ. ನಿ.ಪಿ. 78 ರಿಂದ 83 ದಾಖಲೆಗಳಲ್ಲಿ ಚಾಸಾ 4 ಸಹಿಗಳು ಇರುತ್ತದೆ. ಸಾಮಾನ್ಯವಾಗಿ ಬ್ಯಾಂಕಿನಲ್ಲಿ ಗ್ರಾಹಕರುಗಳಿಗೆ ಬ್ಯಾಂಕಿನ ಫಾರ್ಮ್ ಗಳನ್ನು ತುಂಬಲು ಸಿಬ್ಬಂದಿಗಳು ಸಹಾಯ ಮಾಡುತ್ತಾರೆ. ನಿಪಿ. 30 ರಿಂದ 77 ದಾಖಲೆಗಳ ಪ್ರಕಾರ ಚಾಸಾ 4 ರಿಗೆ ಸೇರಿದ ಯಾವುದೇ ಹಣ ದುರುಪಯೋಗ ಆಗಿರುವುದಿಲ್ಲ.

ಒಬ್ಬ ಕಾವೇರಪ್ಪ ಎನ್ನುವವರ ಖಾತೆಯನ್ನು ಆರೋಪಿ ಕೆ.ವೈ.ಸಿ ನಿಯಮಾವಳಿಗಳನ್ನು ಪಾಲಿಸದೇ ಪ್ರಾರಂಭಿಸಿದ್ದಾರೆ ಎನ್ನುವುದಕ್ಕೆ ಯಾವುದೇ ದಾಹಲೆಗಳು ಇರುವುದಿಲ್ಲ. ಆರೋಪಿ ಸದರಿ ಕಾವೇರಪ್ಪನಿಗೆ ಕಾರ್ ಲೋನ್ ಕೊಟ್ಟ ಬಗ್ಗೆ ದಾಖಲೆಗಳನ್ನು ಪರಿಶೀಲಿಸಿರುವುದಿಲ್ಲ.

ಆರೋಪಿಯು ತನ್ನ ಅಧಿಕಾರಾವಧಿಯನ್ನು ದುರುಪಯೋಗಪಡಿಸಿಕೊಂಡಿದ್ದಾನೆ ಎಂದು ಸುಳ್ಳು ಹೇಳಿದ್ದೇನೆ ಎನ್ನುವುದು ಸರಿಯಲ್ಲ. ಚಾಸಾ 5 ರವರಿಗೆ ಬ್ಯಾಂಕಿನಲ್ಲಿ ಜಂಟಿ ಖಾತೆ ಇದ್ದು ಆದರೆ, ದೂರನ್ನು ಚಾಸಾ 5 ಮಾತ್ರ ಕೊಟ್ಟಿರುತ್ತಾರೆ ಚಾಸಾ 5 ರ ಹಣ ದುರುಪಯೋಗವಾಗಿದೆ ಎಂದು ಹೇಳುವ ದಿನಾಂಕದಿಂದ ಅವರು ದೂರನ್ನು ನೀಡುವವರೆಗೆ ಬ್ಯಾಂಕಿನ ತಮ್ಮ ಖಾತೆಯಲ್ಲಿ ವ್ಯವಹರಣೆಯನ್ನು ಮಾಡಿರುತ್ತಾರೆ. ಆ ಅವಧಿಯಲ್ಲಿ ಅವರು ನನಗೆ ಯಾವುದೇ ದೂರನ್ನು ನೀಡಿರಲಿಲ್ಲ. ಸದರಿ ಚಾಸಾ 5 ರವರ ಯಾವುದೇ ಹಣ ದುರುಪಯೋಗವಾಗಿಲ್ಲ ಎನ್ನುವುದು ಮತ್ತು ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಇಲಾಖಾ ತನಿಖಾ ವರದಿಯು ಆರೋಪಿಯ ಪರವಾಗಿ ಬಂದಿರುವುದರ ಕಾರಣಕ್ಕೆ ನಾನು ಸದರಿ ದಾಖಲೆಯನ್ನು ತನಿಖಾಧಿಕಾರಿಗೆ ಕೊಟ್ಟಿಲ್ಲ ಎನ್ನುವುದು ಸರಿಯಲ್ಲ. ಆರೋಪಿಯು ಯಾವುದೇ ಅಪರಾಧ ಮಾಡದೇ ಇದ್ದರೂ ನಾನು ಆರೋಪಿಯ ಮೇಲಿನ ಹಳೆಯ ದ್ವೇಷದಿಂದ ಸುಳ್ಳು ದೂರುಗಳನ್ನು ದಾಖಲಿಸಿಕೊಂಡು ಸುಳ್ಳು ಸಾಕ್ಷ್ಯಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇದೆ.

ಪ್ರಧಾನ ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಹುಣಸೂರು.